ನಾನಿನ್ನೂ ಕಾಯುತ್ತಿದ್ದೇನೆ' ಎಂದು ತಮ್ಮ ನಿರೀಕ್ಷೆಯನ್ನು ಹೇಳಿಕೊಳ್ಳುತ್ತಾರೆ.

ಸಿನಿಮಾಗಳನ್ನು ಆಯ್ಕೆ ಮಾಡುವಾಗಲೂ ರಾಧಿಕಾ ಎಲ್ಲ ಅಂಶಗಳನ್ನೂ ಗಮನಿಸುತ್ತಾರಂತೆ. ಸಿನಿಮಾದಲ್ಲಿ ತಮ್ಮ ಪಾತ್ರಕ್ಕೆ ತೂಕವಿದ್ದರೆ ಮಾತ್ರ ಅದನ್ನು ಒಪ್ಪಿಕೊಳ್ಳುವುದಾಗಿ ಹೇಳುತ್ತಾರೆ.

'ಸಿನಿಮಾ ಆಯ್ಕೆಗೆ ಮುನ್ನ ನಿರ್ದೇಶಕರು, ಸಹ ಕಲಾವಿದರು ಯಾರು ಎಂಬುದನ್ನು ತಿಳಿದುಕೊಳ್ಳುತ್ತೇನೆ. ಕಥೆಯ ಗಟ್ಟಿತನ ಹಾಗೂ ನನ್ನ ಪಾತ್ರಕ್ಕಿರುವ ಪ್ರಾಮುಖ್ಯವನ್ನು ಮೊದಲು ಗಮನಿಸುತ್ತೇನೆ. ಆನಂತರ ಯೋಚಿಸಿ ಸಿನಿಮಾ ಒಪ್ಪುತ್ತೇನೆ. ಆ ಪಾತ್ರಕ್ಕೆ ತಕ್ಕ ತಯಾರಿ ಮಾಡಿಕೊಳ್ಳುತ್ತೇನೆ' ಎನ್ನುತ್ತಾರೆ. ಇದೇ ಸಂದರ್ಭ, 'ಚೇಸ್' ಸಿನಿಮಾಗಾಗಿ ತಾವು 'ಕ್ರವ್ ಮಾಗಾ' ಎಂಬ ಸಮರ ಕಲೆಯನ್ನು ಕಲಿತಿದ್ದನ್ನೂ ನೆನಪಿಸಿಕೊಳ್ಳುತ್ತಾರೆ. ಸಿನಿಮಾಗೆ ತಕ್ಕಂತೆ ತಮ್ಮನ್ನು ತಾವು ತಿದ್ದಿಕೊಳ್ಳುವುದು ಕಲಾವಿದರ ಅತಿಮುಖ್ಯ ಜವಾಬ್ದಾರಿ ಎನ್ನುತ್ತಾರೆ.

ಈಚೆಗೆ ಬಿಡುಗಡೆಯಾಗಿರುವ, ರಮೇಶ್ ಅರವಿಂದ್ ನಟನೆಯ 'ಶಿವಾಜಿ ಸುರತ್ಕಲ್ 2' ಸಿನಿಮಾದಲ್ಲಿಯೂ ರಮೇಶ್ ಅರವಿಂದ್ ಪತ್ನಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ರಾಧಿಕಾ. 'ಪತ್ತೇದಾರಿ ಜೊತೆಜೊತೆಗೆ ಸಂಬಂಧಗಳನ್ನು ಎಕ್ಸ್‌ಪ್ಲೋರ್ ಮಾಡುವ ಈ ಸಿನಿಮಾ, ಜನರಿಗೆ ತುಂಬಾ ಇಷ್ಟವಾಗುತ್ತದೆ. ಥ್ರಿಲ್ಲಿಂಗ್ ಅನುಭವ ನೀಡುತ್ತದೆ' ಎಂದು ಭರವಸೆ ವ್ಯಕ್ತಪಡಿಸುತ್ತಾರೆ.

ವೆಬ್ ಸೀರೀಸ್‌ನಲ್ಲೂ ನಟಿಸಿರುವ ರಾಧಿಕಾ ನಾರಾಯಣ್, ಕನ್ನಡ ಸಿನಿಮಾರಂಗ, ಒಟಿಟಿ ಬಂದ ನಂತರ ಇನ್ನಷ್ಟು ಹಿಗ್ಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸುತ್ತಾರೆ. 'ಈಚಿನ ಕೆಲವು ವರ್ಷಗಳಲ್ಲಿ ಕನ್ನಡ ಸಿನಿಮಾರಂಗ ರಾಷ್ಟ್ರೀಯ– ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿದೆ. ಕನ್ನಡ ಸಿನಿಮಾಗಳ ಕುರಿತು ಎಲ್ಲೆಲ್ಲೂ ಕೇಳಿಬರುತ್ತಿದೆ. ಕನ್ನಡ ಸಿನಿಮಾರಂಗದ ಭವಿಷ್ಯ ಉತ್ತಮವಾಗಿರಲಿದೆ' ಎಂದು ಹೇಳುತ್ತಾರೆ.

ಸದ್ಯ, ನಟ ದಿಗಂತ್ ಜೊತೆ 'ಎಡಗೈ ಅಪಘಾತಕ್ಕೆ ಕಾರಣ' ಸಿನಿಮಾದಲ್ಲಿ ರಾಧಿಕಾ ನಾರಾಯಣ್ ನಟಿಸುತ್ತಿದ್ದು, ಸಿನಿಮಾ ಚಿತ್ರೀಕರಣ ಪೂರ್ಣವಾಗಿದೆ. ಈ ಸಿನಿಮಾ ಕೂಡ ಸಸ್ಪೆನ್ಸ್ ಕಥೆ ಹೊಂದಿದ್ದು, ಕೆಲವೇ ದಿನಗಳಲ್ಲಿ ಬಿಡುಗಡೆಯಾಗಲು ಸಿದ್ಧತೆ ನಡೆಯುತ್ತಿದೆ. ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ವೀರಕಂಬಳ' ಸಿನಿಮಾದಲ್ಲಿ ಕಮಿಷನರ್ ಪಾತ್ರದಲ್ಲಿ ರಾಧಿಕಾ ಕಾಣಿಸಿಕೊಳ್ಳಲಿದ್ದು, ಎರಡೂ ಸಿನಿಮಾಗಳು ಪ್ರೇಕ್ಷಕರಿಗೆ ಇಷ್ಟವಾಗುವ ಗ್ಯಾರಂಟಿಯಿದೆ' ಎಂದು ನಗುತ್ತಾರೆ. ■

# ಚಂದನವನದಲ್ಲಿ ಡಿಂಪಲ್ ಹಯಾತಿ

ತೆಲುಗಿನ 'ಗದ್ದಾಲಕೊಂಡ ಗಣೇಶ್' ಚಿತ್ರದ ಹಾಡೊಂದಕ್ಕೆ ಕುಣಿದು ಎಲ್ಲರ ಗಮನ ಸೆಳೆದಿದ್ದ ನಟ ಡಿಂಪಲ್ ಹಯಾತಿ ಇದೀಗ ಚಂದನವನಕ್ಕೆ ಕಾಲಿಟ್ಟಿದ್ದಾರೆ. ಬೋಲ್ಡ್ ಬ್ಯೂಟಿ ಎಂದೇ ಕರೆಸಿಕೊಂಡಿರುವ ಅವರು, ಕನ್ನಡದ 'ದಿಲ್‌ಮಾರ್' ಸಿನಿಮಾದಲ್ಲಿ ನಟಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ತೆಲುಗು, ತಮಿಳು ಚಿತ್ರರಂಗಕ್ಕೆ ಚಿರಪರಿಚಿತ ನಟ ಡಿಂಪಲ್ ಹಯಾತಿ. 2017ರಲ್ಲಿ 'ಗಲ್ಫ್' ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ಹಯಾತಿ, ನಂತರ ದೇವಿ, ಅಭಿನೇತ್ರಿ 2, ಗದ್ದಾಲಕೊಂಡ ಗಣೇಶ್, ಯುರೇಕಾ, ಅತ್ರಂಗಿ ರೇ, ವೀರಮೆ ವಾಗಿ ಸೂಡಂ, ಕಿಲಾಡಿ, ರಾಮಬಾಣಂ... ಹೀಗೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಏಳೆಂಟು ಸಿನಿಮಾಗಳಲ್ಲಿ ನಟಿಸಿರುವ ಹಯಾತಿ, ಮೊದಲ ಬಾರಿ ನಾಯಕ ನಟಿಯಾಗಿ ಕನ್ನಡ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

2022ರ ವರ್ಷದಲ್ಲಿ, ಹಯಾತಿ ನಟನೆಯ ಸಿನಿಮಾಗಳು ಥಿಯೇಟರ್‌ನಲ್ಲಿ ಹಣ ಗಳಿಸುವಲ್ಲಿ ಹಿಂದೆ ಬಿದ್ದಿದ್ದವು. ಈ ಸೋಲಿನ ಹೊರತಾಗಿಯೂ ಇನ್ನಷ್ಟು ಗಟ್ಟಿಯಾಗಿ ಸಿನಿಮಾ ರಂಗಕ್ಕೆ ಹಿಂತಿರುಗುವುದಾಗಿ ಹೇಳಿಕೊಂಡಿದ್ದರು ಹಯಾತಿ. ಇದೀಗ ತಾವು ನಟಿಸುತ್ತಿರುವ 'ದಿಲ್‌ಮಾರ್' ಸಿನಿಮಾ, ಈ ಸೋಲಿನ ಸರಪಳಿಯನ್ನು ಮುರಿಯುವ ನಿರೀಕ್ಷೆ ಹೊಂದಿದ್ದಾರೆ.

ಕೆಜಿಎಫ್ ಕಥೆಗಾರ ಚಂದ್ರಮೌಳಿ 'ದಿಲ್ ಮಾರ್' ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ಯುವ ಪ್ರತಿಭೆ ರಾಮ್ ನಾಯಕನಾಗಿದ್ದು, ನಟ ಸಾಯಿಕುಮಾರ್ ಖಳನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಮೂಡಿಬರುತ್ತಿರುವ 'ದಿಲ್‌ಮಾರ್' ಸಿನಿಮಾ ಶೂಟಿಂಗ್ ಮುಗಿದಿದ್ದು, ಮೇ ಕೊನೆಯ ವಾರ ತೆರೆಗೆ ಬರುವ ನಿರೀಕ್ಷೆಯಿದೆ. ■

